**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 62K– ತೃತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80**      **ಸಮಯ : 03.00 ಗಂಟೆಗಳು**

*******************************************************************************

**ಅಭ್ಯಾಸ ಪತ್ರಿಕೆ–4**

*******************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8x1=8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳು
   ಎ) ಐದು    ಬಿ) ಇಪ್ಪತ್ತೈದು
   ಸಿ) ಹದಿಮೂರು    ಡಿ) ಹತ್ತು
2. 'ನೆಲಕ್ಕ' ಪದದ ಗ್ರಾಂಥಿಕ ರೂಪ
   ಎ) ನೆಲ    ಬಿ) ನೆಲಕ್ಕೆ
   ಸಿ) ನೆಲವು    ಡಿ) ನೆಲದ
3. 'ಶರಣರ ಸಾವು ಮರಣದಲ್ಲಿ ನೋಡು' ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ
   ಎ) ಆವರಣ    ಬಿ) ಉದ್ಧರಣ
   ಸಿ) ಭಾವಸೂಚಕ    ಡಿ) ವಾಕ್ಯವೇಷ್ಟನ
4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನಗಳಾಗಿರುವಂತೆ ರಚಿತವಾದ ವಾಕ್ಯಗಳೇ
   ಎ) ಮಿಶ್ರವಾಕ್ಯ    ಬಿ) ಸಂಯೋಜಿ ವಾಕ್ಯ
   ಸಿ) ಅಧೀನವಾಕ್ಯ    ಡಿ) ಸಾಮಾನ್ಯ ವಾಕ್ಯ
5. 'ಗ್ರಂಥಗಿರಿ' ಇಲ್ಲಿರುವ ಅಲಂಕಾರ
   ಎ) ಉತ್ಪ್ರೇಕ್ಷ    ಬಿ) ಉಪಮಾ
   ಸಿ) ರೂಪಕ    ಡಿ) ಚಿತ್ರಕವಿತ್ವ
6. ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಸಮಸ್ಯೆಗಳು ಎದುರಾದವು – ಈ ವಾಕ್ಯದಲ್ಲಿ ಚತುರ್ಥೀ ವಿಭಕ್ತಿ ಪತ್ಯಯದಿಂದ ಕೂಡಿರುವ ಪದ
   ಎ) ಗೊರೂರರಿಗೆ    ಬಿ) ನಗರದಲ್ಲಿ
   ಸಿ) ಎದುರಾದವು    ಡಿ) ಸಮಸ್ಯೆಗಳು
7. ಕೆಳಗಿನವುಗಳಲ್ಲಿ ಪೋರ್ಚ್‌ಗೀಸ್ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ
   ಎ) ಸಾಬೂನು    ಬಿ) ಸ್ಕೂಲ್
   ಸಿ) ಕಚೇರಿ    ಡಿ) ಭೂಮಿ
8. 'ಮೈದಡವಿ' ಈ ಸಮಾಸಕ್ಕೆ ಉದಾಹರಣೆಯಾಗಿದೆ
   ಎ) ದ್ವಿಗು    ಬಿ) ಕ್ರಿಯಾ
   ಸಿ) ಗಮಕ    ಡಿ) ದ್ವಂದ್ವ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4x1=4**

9. ಭಾರತ : ರೂಪಾಯಿ :: ಅಮೆರಿಕಾ : ––––––––––––––––––
10. ಕುಲಕರ್ಣಿ : ಭಾರತೀಯ ಅಧಿಕಾರಿ :: ಡಿ.ಎಸ್.ಪಿ. : ––––––––––

ಪು.ಸಂ -೨೦

11. ಬೂಟಕತನದಲಿ : ಬಹಳ ಬಕುತಿ ಮಾಡಿ :: ನಾಟಕ ಸ್ತ್ರೀಯಂತೆ : ----------

12. ಸಪ್ಪೆ ದಂಟಾದೊ : ದನಕರ :: ಅಪ್ಪರಿಲ್ಲದೆ ಸೊಪ್ಪಾದೊ : ---------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4x1=4**

13. ಆರ್.ಕಲ್ಯಾಣಮ್ಮ ಯಾರು?
14. ಭೀತವಿಸ್ಮಿತರಾದ ಕವಿ ಸಿ.ಪಿ.ಕೆ. ಅವರು ಯಾರ ಹಾಗೆ ತತ್ತರಿಸಿದರು?
15. ಮಂತ್ರಿಯಾಗಲು ಯಾವ ಗುಣ ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ?
16. ಧರ್ಮಪದನ ತಾಯಿಯ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8x2=16**

17. ಶರೀಫರು ತಮಗಾದ ದು:ಖವನ್ನು ದೂರಮಾಡಿಕೊಂಡ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
18. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡು ಬರುವ ಪ್ರಮುಖ ವಿಚಾರಗಳನ್ನು ತಿಳಿಸಿರಿ.
19. ಗಾಂಧೀಜಿಯವರು ಕೊಡಗಿನ ಗೌರಮ್ಮನವರ ಮನೆಗೆ ಬರಲು ಕಾರಣವಾದ ಸಂದರ್ಭವನ್ನು ವಿವರಿಸಿರಿ.
20. ಕಿತ್ತೂರು ಚೆನ್ನಮ್ಮನು ಸೆರೆಯಾಗಲು ಕಾರಣವೇನು? ವಿವರಿಸಿರಿ.
21. ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ಹೇಳಿರುವುದರ ಔಚಿತ್ಯವನ್ನು ತಿಳಿಸಿರಿ.
22. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೆ ಎಂದು ಕವಿ ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ?
23. ಅಂತ:ಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಬಸವಣ್ಣನವರು ತಿಳಿಸಿದ್ದಾರೆ?
24. ಸಾವೇ ಭುಜ ಸವರಿಕೊಂಡು ಹೋದಂತೆ ಲೇಖಕರಿಗೆ ಭಾಸವಾದುದೇಕೆ? ವಿವರಿಸಿರಿ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2x 3=6**

25 "ಪೊಲೀಸ್‌ನವರ ಸಹವಾಸವಾದ ಮೇಲೆ ಲಾಕಪ್ ಆಗಲೇ ಬೇಕಷ್ಟೆ"

26. "ಆಚಾರವೇ ಸ್ವರ್ಗ! ಅನಾಚಾರವೇ ನರಕ".

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4x 3=12**

27. ರಾಮಸಿಂಗ್ ಕುಟುಂಬದವರ ದೇಶಪ್ರೇಮವನ್ನು ಮತ್ತು ತ್ಯಾಗವನ್ನು ವಿವರಿಸಿರಿ.
28. ಶಿವಾಜಿಯು ಮಲ್ಲಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
29. 'ಉದರವೈರಾಗ್ಯ' ಕೀರ್ತನೆಯಲ್ಲಿ ಪುರಂದರದಾಸರು ಡಂಭಾಚಾರದ ಭಕ್ತಿಯನ್ನು ಚಿತ್ರಿಸಿರುವ ಬಗೆಯನ್ನು ಮೆಚ್ಚುವಂಥದ್ದು, ಏಕೆ?
30. 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 2x 3=6**

31. ಆರ್ ಎಸ್ ಸುಂಕದ
32. ಸತೀಶ ಕುಲಕರ್ಣಿ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1x 3=3**

33. "ಹಾಸಿಗೆ ಇದ್ದಷ್ಟು ಕಾಲು ಚಾಚು"

ಅಥವಾ

"ದೇಶ ಸುತ್ತಿ ನೋಡು; ಕೋಶ ಓದಿ ನೋಡು"

**IX. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1x 4=4**

34. ಶಂ.ಬಾ.ಜೋಶಿಯವರ 'ಯಕ್ಷಪ್ರಶ್ನೆ' ಬೀಚಿಯವರ ಮನಸ್ಸನ್ನು ಹೇಗೆ ಸೂರೆಗೊಂಡಿತು? ವಿವರಿಸಿರಿ.

ಅಥವಾ

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು? ವಿವರಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1x 4=4**

35. ಕಣ್‌ದಿಟ್ಟಿ ------------------------------------

-------------------------------------------

-------------------------------------------

------------------------------------ ನನ್ನ ಮತಿ

**ಅಥವಾ**

ಮುದುಡಿ ---------------------------------------

-------------------------------------------

-------------------------------------------

----------------------------------- ಬಹ ಲಯಕೆ!

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **4 x 1=4**

ಡಾ.ಎಸ್.ರಾಧಾಕೃಷ್ಣನ್ ಅವರ ಬಾಹ್ಯರೂಪ ಎತ್ತರವಾದ ನಿಲುವು, ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ಅವರ ವೇಷಭೂಷಣಗಳಾಗಿತ್ತು. ಕೋಪಸೂಚಕವಲ್ಲದ ಹುಬ್ಬು, ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ, ಮುಗುಳುನಗೆಯ ಸುಳಿವು ಇವು ಭಾರತೀಯರೆಲ್ಲರಿಗೂ ಪರಿಚಿತ. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಕೊನೆಯವರೆಗೂ ಜತನವಾಗಿ ಉಳಿಸಿಕೊಂಡರು. ಉಪರಾಷ್ಟ್ರಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ನಾಮಕರಣ ಮಾಡಲಾಯಿತು. ಅವರಿಗೆ ಬರುತ್ತಿದ್ದ ಹತ್ತುಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು. ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ'ನೀಡಿ ಗೌರವಿಸಲಾಯಿತು. ಶಿಕ್ಷಕ ಹುದ್ದೆಯಿಂದ ರಾಷ್ಟ್ರಪತಿ ಹುದ್ದೆಯವರೆಗೆ ಹಂತಹಂತವಾಗಿ ಮೇಲೇರಿದ ಮಹಾನ್ ನಾಯಕ ಕ್ರಿ.ಶ 1975 ರಲ್ಲಿ ಇಹಲೋಕ ತ್ಯಜಿಸಿದರು. ಶ್ರೇಷ್ಠ ಶಿಕ್ಷಣ ತಜ್ಞ, ಮಹಾ ತತ್ವಜ್ಞಾನಿ, ಮಾನವತಾವಾದಿಯಾಗಿ ಬಹುಮುಖ ಪ್ರತಿಭೆಯಿಂದ ವಿಶ್ವವಿಖ್ಯಾತರಾದರು.

36. ಪ್ರಶ್ನೆಗಳು:

1. ಡಾ.ಎಸ್.ರಾಧಾಕೃಷ್ಣನ್ ಅವರ ವೇಷಭೂಷಣ ಹೇಗಿತ್ತು?
2. ಡಾ.ಎಸ್.ರಾಧಾಕೃಷ್ಣನ್ ಅವರ ಯಾವ ವಿಚಾರಗಳ ಕುರಿತಾಗಿ ಭಾರತೀಯರಿಗೆ ಪರಿಚಯವಿತ್ತು?
3. ಡಾ.ಎಸ್.ರಾಧಾಕೃಷ್ಣನ್ ಅವರು ಯಾವ ಯಾವ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು?
4. ಡಾ.ಎಸ್.ರಾಧಾಕೃಷ್ಣನ್ ಅವರ ಸ್ಮರಣೀಯ ಸೇವೆಗೆ ಸಂದ ಪ್ರಶಸ್ತಿ ಯಾವುದು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **4x 1=4**

37. ರಾಷ್ಟ್ರೀಯ ಭಾವೈಕ್ಯತೆ

**ಅಥವಾ**

ಶಾಲಾ ಗ್ರಂಥಾಲಯ

**XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **5x1=5**

38. ನಿಮ್ಮನ್ನು ಗೌರಿಬಿದನೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರೇಶ್ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಮಾಡಿಕೊಡುವಂತೆ ಕೋರಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ನಾಗಮಂಗಲದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ನಾಗೇಶ್ ಎಂದು ಭಾವಿಸಿಕೊಂಡು, ಹುಟ್ಟುಹಬ್ಬಕ್ಕೆ ಆಹ್ವಾನಿಸುತ್ತ ಮೈಸೂರಿನಲ್ಲಿರುವ ಗೆಳೆಯ ಹರೀಶನಿಗೆ ಒಂದು ಪತ್ರವನ್ನು ಬರೆಯಿರಿ.

⦿⦿⦿⦿⦿